ಕಟ್ಟಿ ಹನಿಗಳು ಉದುರಲು ಆರಂಭಿಸಿದವು. ಒಂದಲ್ಲ ಏಳು ಬಾರಿ ಹೊಲ ಉತ್ತು ಭೂಮಿಯನ್ನು ಸಿದ್ಧಗೊಳಿಸಿದ. ಅಷ್ಟರಲ್ಲಿ ಅವನ ಏಳು ಹುಣ್ಣುಗಳಲ್ಲಿ ಒಂದು ವಾಸಿಯಾಯಿತು.

ಅಕ್ಕಪಕ್ಕದ ಹಳ್ಳಿಗಳ ಮುದುಕಿಯರಲ್ಲಿ ಬೇಡಿ ಅವರು ಮೂಡೆಗಳಲ್ಲಿ ಕಟ್ಟಿಟ್ಟ ಬೀಜಗಳನ್ನು ಪಡೆದ. ರೈತರಲ್ಲಿ ಬೇಡಿ ಕುರಿ ಆಡು ದನಗಳ ಗೊಬ್ಬರ ಪಡೆದ. ಉತ್ತು ಹಸನು ಮಾಡಿದ ಭೂಮಿಯಲ್ಲಿ ಬಿತ್ತನೆ ಮಾಡಿದ ಸಸಿಗಳು ನೆಲದಿಂದ ಒಡೆದು ಮೂಡುವುದನ್ನು ಎದುರು ನೋಡುತ್ತಾ ಕುಳಿತ. ಬೀಜಗಳು ಸಸಿಯಾಗಿ ಹೊರ ಹೊಮ್ಮಿದವು. ಆಗ ರಾಜನಿಗೂ ರಾಣಿಯರಿಗೂ ಆದ ಸಂತೋಷ ಅಷ್ಟಿಷ್ಟಲ್ಲ. ಅಲ್ಲಿಗೆ ರಾಜನ ಇನ್ನೊಂದು ಹುಣ್ಣು ವಾಸಿಯಾಯಿತು.

ಮಳೆ ಒಂದೆರಡು ಬಾರಿ ಬಂದಿತ್ತು ಅಷ್ಟೆ. ಗಿಡಗಳಿಗೆ ನೀರು ಸಾಕಾಗುತ್ತಿರಲಿಲ್ಲ. ರಾಣಿಯರು ಹಳ್ಳಿಗಳಿಗೆ ಹೋಗಿ ಕುಂಬಾರರಿಂದ ಹರವಿಗಳನ್ನು ಕಡ ತಂದರು. ಇಂಗಿ ಹೋಗಿದ್ದ ದೂರದ ಹಳ್ಳಗಳಲ್ಲಿ ಮರಳು ತೆಗೆದು ಜಲ ಬರಿಸಿ ಹರವಿಗಳಲ್ಲಿ ತಂದು ಸಸಿಗಳಿಗೆ ಹುಯ್ದರು. ಸಸಿಗಳು ಮರಗಳಾಗಿ ಬೆಳೆಯತೊಡಗಿದವು. ನೆಲಕ್ಕೆ ನೆರಳು ಚಾಚಿ ಭೂಮಿಯನ್ನು ತಂಪುಗೊಳಿಸಿದವು. ಆ ತಂಪಿನಲ್ಲಿ ಎರೆಹುಳು, ಗೊಬ್ಬರದ ಹುಳು, ಸಗಣಿ ಹುಳು, ಗೆದ್ದಲು ಹುಳು, ಇರುವೆ, ಗೊದ್ದ ಮುಂತಾದ ಅನೇಕ ಬಗೆಯ ಜೀವಿಗಳು ಉತ್ಪತ್ತಿಯಾದವು. ಆಗ ರಾಜನ ಇನ್ನೊಂದು ಹುಣ್ಣು ಮಾಯವಾಯಿತು.

ಅಷ್ಟರಲ್ಲಿ ರಾಜ ಮತ್ತು ಅವನ ನೂರು ಜನ ರಾಣಿಯರು ಪೂರ್ಣವಾಗಿ ರೈತರಾಗಿ ಪರಿವರ್ತಿತರಾಗಿದ್ದರು. ಅವರ ಅರಮನೆ, ಚಿನ್ನ, ಸಂಪತ್ತು ಎಲ್ಲವೂ ಮರೆತು ಹೋಗತೊಡಗಿದ್ದವು. ಒಂದೊಂದು ಹುಣ್ಣು ವಾಸಿಯಾಗುತ್ತಿದ್ದಂತೆ ರಾಜನಿಗೆ ಬದುಕಬೇಕೆಂಬ ಆಸೆ ಹೆಚ್ಚಾಯಿತು. ಹಗಲಿರುಳೆನ್ನದೆ ಹೊಸ ವನಾಂತರದಲ್ಲಿ ಎಲ್ಲರೂ ದುಡಿಯತೊಡಗಿದರು. ನೋಡನೋಡುತ್ತಿದ್ದಂತೆ ವನವೆಲ್ಲ ಹಸಿರಿನಿಂದ ಕಂಗೊಳಿಸತೊಡಗಿತು. ಮರಗಳು ಹೂ ಬಿಟ್ಟವು. ಆ ಹೂವುಗಳ ಕಂಡು ದುಂಬಿಗಳು, ಚಿಟ್ಟೆಗಳು, ಜೇನುಹುಳುಗಳು ಹಾಗೂ ವಿವಿಧ ಕೀಟಗಳು ಆಕರ್ಷಿತವಾಗಿ ಬಂದವು. ಹೂಗಳ ಮಕರಂದ ಹೀರಿ ಆನಂದಪಟ್ಟವು. ಅಲ್ಲಿಗೆ ರಾಜನ ನಾಲ್ಕನೆ ಹುಣ್ಣು ವಾಸಿಯಾಯಿತು.

ಕೀಟಗಳ ಸ್ಪರ್ಶ ಪಡೆದ ಹೂಗಳು ಹೀಚುಗಳಾಗಿ ಪರಿವರ್ತನೆಯಾದವು. ಹೀಚು ಬಲಿತು ಕಾಯಿಗಳಾಗಿ ಮರ ಮರದಲ್ಲಿಯೂ ತುಂಬಿ ತುಳುಕಾಡಿದವು. ಕಾಯಿಗಳನ್ನು ತಿನ್ನಲು ಅಳಿಲುಗಳು, ಓತಿಕ್ಯಾತಗಳು, ಮಂಗಗಳು ಧಾವಿಸಿ ಬಂದವು. ಕಾಯಿಗಳನ್ನು ಕಚ್ಚಿ ಕಚ್ಚಿ ರುಚಿನೋಡುತ್ತಾ ಮನಸಾರೆ ತಿಂದು ಸಂತಸಗೊಂಡವು. ಅಲ್ಲಿಗೆ ರಾಜನ ಐದನೇ ಹುಣ್ಣು ವಾಸಿಯಾಯಿತು.

ಬಲಿತ ಕಾಯಿಗಳು ಹಣ್ಣಾಗಲು ತಡವಾಗಲಿಲ್ಲ. ಹಸಿರು ಬಣ್ಣವನ್ನು ಬಿಟ್ಟು ಹಳದಿ, ಕೆಂಪು, ನೇರಳೆ ಮುಂತಾದ ವಿವಿಧ ಬಣ್ಣಗಳನ್ನು ಪಡೆದವು. ಬಣ್ಣದ ಜೊತೆಗೆ ಗಮಗಮಿಸುವ ಸುವಾಸನೆಯನ್ನು ಪಡೆದವು. ಅವುಗಳ ಗಂಧ ಗಾಳಿಯ ಜೊತೆಗೂಡಿ ಯೋಜನಗಳನ್ನು ದಾಟಿ ಹರಡಿಕೊಂಡಿತು. ತಮಗಿಷ್ಟವಾದ ಹಣ್ಣುಗಳ ರುಚಿಯನ್ನು ಸವಿಯಲು ನೂರೆಂಟು ಬಗೆಯ ಪಕ್ಷಿಗಳು ದೂರದೇಶದಿಂದಲೂ ಬಂದವು. ವಿವಿಧ ಸ್ವರಗಳಲ್ಲಿ ಚಿಲಿಪಿಲಿ ರಾಗ ಹಾಡುತ್ತಾ ಹಕ್ಕಿಗಳು ಹಣ್ಣುಗಳನ್ನು ತಿಂದವು. ಅದಾಗ ರಾಜನ ಆರನೇ ಹುಣ್ಣು ವಾಸಿಯಾಯಿತು.

ಅಷ್ಟರಲ್ಲಿ ರಾಜರಾಣಿಯರಿಗೆ ತಮ್ಮ ಪಟ್ಟಣದ ಅರಮನೆ ಚಿನ್ನ, ಸಂಪತ್ತು ಎಲ್ಲವೂ ಪರಿಪೂರ್ಣವಾಗಿ ಮರೆತು ಹೋಗಿತ್ತು. ಅವರು ಅಪ್ಪಟ ರೈತರಾಗಿ ಮರಗಿಡಗಳೇ ನಮ್ಮ ಸಂಪತ್ತು ಎಂದು ಸಂತೋಷದಿಂದ ಬದುಕುತ್ತಿದ್ದರು. ಆದರೆ ಏಳನೇ ಹುಣ್ಣು ಇನ್ನೂ ವಾಸಿಯಾಗಿರಲಿಲ್ಲ. ನೋವು ಕಡಿಮೆಯಾಗಿತ್ತಾದರೂ ಪೂರ್ಣ ಗುಣಮುಖನಾಗಿರಲಿಲ್ಲ. ಅದೊಂದು ಕೊರತೆ ರಾಜನನ್ನು ಇನ್ನೂ ಕಾಡುತ್ತಿತ್ತು. ರಾಜ ಮತ್ತು ರಾಣಿಯರ ಶ್ರಮದಿಂದಾಗಿ ವನಾಂತರ ಬೆಳೆದು